# ಸಾಗರ

ಡಾ. ಪ್ರೇಮಲತ ಬಿ.

'ತಾನೊಬ್ಬನನ್ನು ಪ್ರೀತಿಸುತ್ತಿದ್ದೇನೆ' ಎಂದು ಸುಧಾ ಫೋನಿನಲ್ಲಿ ಹೇಳಿದ್ದಳು. ಅದನ್ನು ಹೇಳುವಾಗ ಸುಧಾಳ ಧ್ವನಿಯಲ್ಲಿದ್ದ ಕಂಪನವನ್ನು ಗುರುತಿಸಿಯೇ ಶಾಂತಿ ಮುದಗೊಂಡಿದ್ದಳು. ಗೆಳತಿಯ ಉದ್ವೇಗ, ಉತ್ಸಾಹ ತುಂಬಿದ ಧ್ವನಿಯನ್ನು ಕೇಳಿ 'ಅದು ನಿನಗೆ ಹೇಗೆ ಗೊತ್ತು?' ಎಂದು ಕಿಚಾಯಿಸಿದ್ದಳು.

ಸುಧಾ ಕಿಲಕಿಲನೆ ನಕ್ಕಿದ್ದಳು. ಶಬ್ದಗಳು ಕವನವಾಗುತ್ತಿರುವ ಬಗ್ಗೆ, ಡಾಂಬರಿನ ರಸ್ತೆ ಹೂಹಾದಿಯಾಗಿರುವ ಬಗ್ಗೆ, ಅವಳ ಬದುಕಿನಲ್ಲಿ ಕಿರಿ ಕಿರಿಯಾಗಿದ್ದವನು ಕೂಡ ಅಮಾಯಕ ಮಗುವಿನಂತೆ ತನಗೆ ಕಾಣಿಸುತ್ತಿರುವ ಬಗ್ಗೆ ಸುಧಾ ಹೇಳಿಕೊಂಡಿದ್ದಳು. ತನ್ನ ಜಗತ್ತಿನಲ್ಲಿರುವ ಎಲ್ಲ ಕಷ್ಟಗಳೂ ತೇಲಿಹೋದಂತೆ, ಇಡೀ ಪ್ರಪಂಚವೇ ಸುಂದರ ಉದ್ಯಾನದಂತೆ ತೋರುತ್ತಿರುವಂತೆ, ಜೊತೆಗೆ ಗಳಿಗೆಗೊಮ್ಮೊಮ್ಮೆ ಸುಮ್ಮಸುಮ್ಮನೆ ತನ್ನ ಮುಖದಲ್ಲಿ ನಗೆಯರಳುತ್ತಿರುವ ಬಗ್ಗೆ ಸುಧಾ ಕವಿಯಂತೆ ಮಾತಾಡಿದ್ದಳು.

ಸ್ವತಃ ಅವಳ ಮಗಳೇ ಅವಳ ಕಳೆತುಂಬಿದ ಹೊಸ ಮುಖವನ್ನು ಗಮನಿಸಿ ದಂಗಾದ ಬಗ್ಗೆ ಹೇಳಿಕೊಂಡಿದ್ದಳು.

ಕೆಂಪಿಳಿಯುತ್ತಿರುವ ಗೆಳತಿಯ ಕೆನ್ನೆಯಲ್ಲಿ ಮತ್ತೆ ಗುಲಾಬಿಯ ರಂಗೇರುವುದನ್ನು ನೋಡಿದ ಶಾಂತಿ, 'ಜಗತ್ತಿನ ಪ್ರತಿಯೊಬ್ಬರಿಗೂ ಈ ರೀತಿಯ ಸೆಕೆಂಡ್ ಚಾನ್ಸ್ ಸಿಕ್ಕರೆ ಎಷ್ಟು ಚೆಂದ' ಎಂದು ಉದ್ಗರಿಸಿದ್ದಳು. ಸುಧಾ ಗೊಳ್ಳನೆ ನಕ್ಕಿದ್ದಳು.

'ಯಾರೇ ಅದು ಮಹಾನುಭಾವ? ನನ್ನ ಹೊಸ ಭಾವ?' ಎಂದು ಶಾಂತಿ ಬಿಡದೆ ಕೆಣಕಿದ್ದಳು.

ತಾವಿಬ್ಬರೂ ಒಂದು ಟ್ರೈನಿಂಗ್ ಕ್ಯಾಂಪ್‌ನಲ್ಲಿ ಮೊದಲಿಗೆ ಭೇಟಿಯಾದ ಬಗ್ಗೆ ಸುಧಾ ಹೇಳಿದ್ದಳು. ತಾನು ಜೀವನದಲ್ಲಿ ಸಂಧಿಸಿದ ಎಲ್ಲ ವ್ಯಕ್ತಿಗಳಲ್ಲಿ ಈ ವ್ಯಕ್ತಿ ಮಾತ್ರ ತನಗೆ ಹೇಗೆ ಇಷ್ಟು ಮನಸ್ಸಿಗೆ ಬಂದುಬಿಟ್ಟ, ತಟ್ಟನೆ ಹತ್ತಿರವಾಗಿಬಿಟ್ಟ ಎಂದು ತನಗೇ ಸೋಜಿಗವೆಂದು ಮಲ್ಲಿಗೆಯಂತೆ ಅರಳಿದ್ದಳು.

'ಅವನಿಗೆ ನೀನವನನ್ನು ಪ್ರೀತಿಸುವ ವಿಚಾರ ಗೊತ್ತು ತಾನೇ?' ಎಂದು ಶಾಂತಿ ಕೇಳಿದ್ದಳು.

'ಹೇ ಶಾಂತಿ ಕಾಲೇಜಿನಲ್ಲಿ ಓದುವಾಗ, ಆ ಹುಡುಗ ನಿನ್ನ ಪ್ರೀತಿಸ್ತಾನೆ ನೋಡು ಅಂತ ನೀನೇ ಹೇಳಿಬಿಡುತ್ತಿದ್ದೆ. ನಿನಗೆ ತಾನೆ ಅದ್ಹೇಗೆ ಗೊತ್ತಾಗ್ತಿತ್ತೇ? ಯಾರಾದರೂ ಪ್ರೇಮಿಗಳು ಮಾತಾಡ್ತಾ ನಿಂತಿರೋವಾಗ ಅವರ ಮುಂದೇ ನಡೆದುಹೋದರೂ ಅವರ ಕಣ್ಣಿಗೆ ನಾವ್ಯಾರೋ ಬೀಳೋದಿಲ್ಲ, ಕಣ್ಣ ತುಂಬ ಪ್ರೀತಿಯದೇ ಹೊಳಿ ಅಂತಿದ್ದೆ. ಅದು ನಿನಗೆ ಹೇಗೆ ಕಾಣ್ತಿತ್ತೇ? ಅಂಥದ್ದೇ ನೋಟ ಈಗ ನನಗೂ ಕಾಣಿಸ್ತಿದೆ. ಆದ್ರೆ ಅದು ನನ್ನ ಕಡೆಗೇ ಇರುವಾಗ ನಾನು ಹೇಗೆ ನೋಡಿ ವಿಮರ್ಶೆ ಮಾಡಲಿ ಹೇಳು? ನನ್ನಂತೆ ಅವನಿಗೂ ತಿಳಿದಿರುತ್ತದೆ ಅಲ್ಲವಾ?' ಅಂತ ಉದ್ವಿಗ್ನಳಾಗಿದ್ದಳು. ಆ ವಾಕ್ಯದಲ್ಲಿ ಅವನಿಗೆ ತಿಳಿದೇ ಇರುತ್ತದೆ ಎನ್ನುವ ನಿಖರತೆಯೂ ಅದರ ಕೊನೆಯಲ್ಲಿ ತಿಳಿದಿಲ್ಲದಿರಲು ಸಾಧ್ಯವಾ? ಎನ್ನುವ ಶಂಕೆಯೂ, ಅಚ್ಚರಿಗಳೂ ಒತ್ತಟ್ಟಿಗೆ ಇದ್ದಂತೆ ಶಾಂತಿಗೆ ಭಾಸವಾಯಿತು. ಹಿಂದೆಯೇ ಶಾಂತಿಯೆಲ್ಲಿ 'ಅದು ಪ್ರೀತಿಯಲ್ಲ' ಅಂದುಬಿಡುತ್ತಾಳೋ ಅನ್ನುವ ದುಗುಡವೂ ತುಂಬಿರುವಂತೆ ಅವಳ ನೋಟವಿತ್ತು.

ಆದರೆ, ಶಾಂತಿ ತನ್ನನ್ನು ಜಡ್ಜ್ ಮಾಡಿಬಿಟ್ಟರೆ ಎನ್ನುವ ಬಗ್ಗೆ ಸುಧಾಳಿಗೆ ಗಮನವಿರಲಿಲ್ಲ. 'ಮಾಡಿದರೂ ಮಾಡಿಕೊಳ್ಳಲಿ ನನಗೇನು' ಎನ್ನುವ ನಿರಾತಂಕ ಇದ್ದಿರಬಹುದು.

ಪ್ರೀತಿಯ ವ್ಯೂಹಕ್ಕೆ ಸಿಲುಕಿದವರ ಉನ್ಮತ್ತತೆ, ಪರವಶತೆ ಗೆಳತಿಯಲ್ಲಿದ್ದುದನ್ನು ಕಂಡು ಶಾಂತಿಯ ಮನಸ್ಸಿಗೆ ಹಿತವೆನ್ನಿಸಿತ್ತು. ತನ್ನ ರೂಪಸಿ ಗೆಳತಿ ಈ ವಯಸ್ಸಿನಲ್ಲಿಯೂ ಎಷ್ಟೊಂದು ಚೆಲುವೆ? ಆದರೆ ಇಷ್ಟುದಿನ ಅವಳ ಕೋರೈಸುವ ಚೆಲುವೆಲ್ಲ ಅವಳ ಜೀವನವನ್ನು ಹೊಕ್ಕಿದ್ದ ರಾವಣನೊಬ್ಬನ ಕಾರಣ ಹೊಳಪು ಕಳೆದುಕೊಂಡಿತ್ತು. ಅಂತಹ ಕತ್ತಲೆ ಗೆಳತಿಯ ಬದುಕಿನಿಂದ ದೂರವಾಗುತ್ತಿರುವ ಬಗ್ಗೆ ಶಾಂತಿಗೆ ಸಮಾಧಾನವೆನಿಸಿತ್ತು. ಆದರೆ, ಕುಹಕವಿಲ್ಲದ ಕುತೂಹಲ ಅವಳನ್ನು ಎಚ್ಚರಿಸಿತು.

'ಅವನು ಡೈವೋರ್ಸಿಯೇನು? ಅಥವಾ ನಿನ್ನಂತ ಮಿಕಗಳಿಗೇ ಕಲ್ಲು ತೂರುವ ಬೇಟೆಗಾರನಾ?' ಅಂತ ಶಾಂತಿ ಕೇಳಿಯೇ ಬಿಟ್ಟಳು.

ಆ ಕಡೆಯಿಂದ ಏದುಸಿರು, ಹಿಂದೆಯೇ ಕಿಲ ಕಿಲನೆಂದು ನಗುವ ಸುಧಾಳ ದನಿ. ಅದಕ್ಕೆ ಅಂಟಿರುವುದು ನಿರಾಶೆಯಾ? ಶಾಂತಿ ಉಸಿರೆಳೆದುಕೊಂಡು ಕಾದಳು.

ಪ್ರೀತಿಯೆನ್ನುವುದು ಮನುಷ್ಯನನ್ನು ಅದೆಷ್ಟು ಜೀವಂತವಾಗಿಸುತ್ತದೆ. ತಾನು ಪ್ರೀತಿಸಲ್ಪಡುತ್ತಿದ್ದೇನೆ ಎಂಬ ಅರಿವೇ ಒಂದು ಮಿಂಚಿನ ಸಂಚಾರವನ್ನು ಸೃಷ್ಟಿಸುತ್ತದೆ. ತನ್ನ ಪ್ರೀತಿಯನ್ನು ಉಣಿಸಲು ಕೂಡ ಅಷ್ಟೇ ಕಾತುರವಿರುತ್ತದೆ. ಅದಕ್ಕೊಂದು ಅವಕಾಶವೇ ಇಲ್ಲದಿದ್ದರೆ ಕುಸಿಯುವ ಜೀವನೋತ್ಸಾಹವನ್ನು ಮತ್ತೇನೂ ಕೊಡಲಾರದೇನೋ? ಏನೇನು

